**OS: 75/2017**
**P.W-1**

## <u>ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ</u>

ದಿನಾಂಕಃ 10.07.2025 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

### <u>ಪಾಟೀ ಸವಾಲು ಪ್ರತಿವಾದಿ ನಂಃ 1 ರವರ ಪರ ವಕೀಲರಿಂದ</u>

ನಾನು ಈ ದಾವೆಯನ್ನು ಗೀತಾ ರಾಣಿ ಮತ್ತು ಅವರ ಮಗನ ಮೇಲೆ ಹೂಡಿರುತ್ತೇನೆ. ಅವರನ್ನು ಹೊರತುಪಡಿಸಿ ಬೇರೆಯವರ ಮೇಲೆ ದಾವೆ ಸಲ್ಲಿಸಿರುವುದಿಲ್ಲ. ನಾನು ಒಂದು ಹೊಲದ ಮೇಲೆ ಈ ದಾವೆಯನ್ನು ಸಲ್ಲಿಸಿರುತ್ತೇನೆ. ಸದರಿ ಹೊಲದ ಸರ್ವೆ ನಂಃ 792, ವಿಸ್ತೀರ್ಣ 12.24 ಎಕರೆ ಇರುತ್ತದೆ. ಸದರಿ ಜಮೀನನ್ನು ನಾನು 20 ವರ್ಷಗಳ ಹಿಂದೆ ನೋಡಿರುತ್ತೇನೆ. ಸದರಿ ದಾವಾ ಆಸ್ತಿ ಮೂಲತಃ ಬಿಜ್ಜಳಪ್ಪರವರಿಗೆ ಸೇರಿದ ಆಸ್ತಿ ಆಗಿರುತ್ತದೆ. ದಾವಾ ಆಸ್ತಿಯ ಪಹಣಿ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಸದರಿ ಆಸ್ತಿಯ ವಿಸ್ತೀರ್ಣ 9.24 ಎಕರೆ ಎಂದು ನಮೂದು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಬಿಜ್ಜಳಪ್ಪನಿಗೆ 4 ಜನ ಮಕ್ಕಳು ಎಂದರೆ ಸರಿ. ಅವರುಗಳೆಂದರೆ ಕೊಟ್ರಪ್ಪ, ಬಸಪ್ಪ, ಗುರಜ್ಜ ಮತ್ತು ಮಲ್ಲಪ್ಪ ಎಂದು ಇರುತ್ತಾರೆ. ಅವರನ್ನು ನಾನು ಜೀವಂತವಿದ್ದಾಗ ನೋಡಿರುವುದಿಲ್ಲ. ಸದರಿಯವರು ಜೀವಂತವಿದ್ದಾಗ ಭಾಗ ಮಾಡಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯು ಯಾರಿಗೆ ಎಷ್ಟು ವಿಸ್ತೀರ್ಣದ ಭಾಗ ಬಂದಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯು ಕೊಟ್ರಪ್ಪ ತಂದೆ ಬಿಜ್ಜಳಪ್ಪರವರ ಭಾಗಕ್ಕೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ.

ಕೊಟ್ರಪ್ಪನ ಮಗನ ಹೆಸರು ಮಲ್ಲಪ್ಪ ಎಂದರೆ ಸರಿ. ಅವರನ್ನು ನಾನು ನೋಡಿರುವುದಿಲ್ಲ. ಕೊಟ್ರಪ್ಪ ಆತನ ಜೀವಿತ ಕಾಲದಲ್ಲಿ ಸಾಗುವಳಿ ಮಾಡುತ್ತಿದ್ದ ಎಂದರೆ ಸರಿ. ಅವರು ಕಾಲವಾದ ನಂತರ ಅವರ ಮಗ ಸಾಗುವಳಿ ಮಾಡುತ್ತಿದ್ದ ಎಂದರೆ ಸರಿ. ಮಲ್ಲಪ್ಪನಿಗೆ ಒಬ್ಬನೇ ಮಗ ಕೊಟ್ರೇಶ್. ಆ ನಂತರ ಆತನೇ ಸಾಗುವಳಿ ಮಾಡುತ್ತಿದ್ದ ಎಂದರೆ ಸರಿ. ಕೊಟ್ರೇಶ್ ರವರನ್ನು ನಾನು ನೋಡಿರುತ್ತೇನೆ. ಕೊಟ್ರೇಶ್ ರವರ ಹೆಂಡತಿ 1 ನೇ ಪ್ರತಿವಾದಿ ಎಂದರೆ ಸರಿ.

7 ನೇ ಪ್ರತಿವಾದಿಯವರು 1 ನೇ ಪ್ರತಿವಾದಿಯವರಿಂದ ಕಾಗದ ಪತ್ರಗಳಿಗೆ ಸಹಿ ಮಾಡಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸಾಚಿ-2 ರ ಆಸ್ತಿಯನ್ನು 7 ನೇ ಪ್ರತಿವಾದಿ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಗಂಡ ಮೃತಪಟ್ಟ ನಂತರ 1 ನೇ ಪ್ರತಿವಾದಿ 9.18 ಎಕರೆಯನ್ನು ಖಾತೆ ಮಾಡಿಸಿಕೊಂಡು ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ಸರಿ. 1 ನೇ ಪ್ರತಿವಾದಿ 2009-10 ನೇ ಸಾಲಿನಲ್ಲಿ ದಾವಾ ಅನುಸೂಚಿ-2 ರ ಆಸ್ತಿಯನ್ನು ಅಳತೆ ಮಾಡಲು ಅರ್ಜಿ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ.

9.18 ಎಕರೆಯನ್ನು 1 ನೇ ಪ್ರತಿವಾದಿಗೆ, ಅನುಸೂಚಿ-2 ರ ಆಸ್ತಿಯನ್ನು 7 ನೇ ಪ್ರತಿವಾದಿಗೆ ಖಾತೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಆಗಿರಬಹುದು.

ಸರ್ವೆ ನಂಃ 792, ವಿಸ್ತೀರ್ಣ 12.24 ಎಕರೆಯಲ್ಲಿ ದಾವಾ ಅನುಸೂಚಿ-1 ಮತ್ತು 3 ನ್ನು 1 ನೇ ಪ್ರತಿವಾದಿಗೆ, ಅನುಸೂಚಿ-2 ರ ಆಸ್ತಿ 7 ನೇ ಪ್ರತಿವಾದಿಗೆ ಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ದಾವಾ ಅನುಸೂಚಿ-1 ಮತ್ತು 3 ನ್ನು ಭೂಪರಿವರ್ತನೆ ಮಾಡಿಸಲಾಗಿದೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ಶೇಕಡ 50 ರಷ್ಟು ಆಸ್ತಿಗಳನ್ನು ಸೈಟ್ ಗಳಾಗಿ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಯಾರಿಗೆ ಮಾರಾಟ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಸೈಟ್ ನ್ನು ಖರೀದಿಸಿದ ವ್ಯಕ್ತಿಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸದರಿ ಸೈಟ್ ಗಳನ್ನು ಖರೀದಿಸಿದವರು ಮನೆಗಳನ್ನು ಕಟ್ಟಿಕೊಂಡಿದ್ದಾರೆ ಎಂದರೆ ಸರಿ. ದಾವೆ ಸಲ್ಲಿಸುವ ಪೂರ್ವದಲ್ಲಿ ದಾವಾ ಆಸ್ತಿಯನ್ನು ಸೈಟ್ ಗಳಾಗಿ ಮಾಡಲಾಗಿತ್ತು ಎಂದರೆ ಸರಿ. ಸದರಿ ಆಸ್ತಿಗಳು 1 ಕೋಟಿಗಿಂತ ಹೆಚ್ಚು ಬೆಲೆಬಾಳುತ್ತವೆ ಎಂದರೆ ಸರಿ.

ಪ್ರತಿವಾದಿ ನಂಃ 7, 10, 12 ರವರು ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕೂಡ್ಲಿಗಿಯಲ್ಲಿ ಓ.ಎಸ್ ನಂಃ 10/2012 ರಂತೆ ಭಾಗಾಂಶಕ್ಕಾಗಿ ಪ್ರತಿವಾದಿ ನಂಃ 1, ವಾದಿ ನಂಃ 1, 2, 27 ರಿಂದ 33 ರವರ ವಿರುದ್ಧ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ದಾವಾ ಅನುಸೂಚಿ-1 ರ ಆಸ್ತಿಗೆ ಸಂಬಂಧಿಸಿದಂತೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಆ ದಾವೆಯು 2016 ರಲ್ಲಿ ವಜಾ ಆಗಿದೆ ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದುಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**